ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಪ್ರಯತ್ನ ಮಾಡುತ್ತೇನೆಂದರೆ ಹೇಗೆ? ಆ ಮಾಲೀಕನಿಗೆ ಕರೆಯಿಸುವುದಕ್ಕಾಗುವುದಿಲ್ಲವೇ? ನಮಗೆ ಅನುಭವ ಇದೆ.

ಉಪಾಧ್ಯಕ್ಷರು : ಕರೆಯಿಸಿ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾಳೆ ಇಲ್ಲ ನಾಡಿದ್ದು ಕರೆಯಿಸಿ.

ಶ್ರೀ ಬಿ. ಸತ್ಯನಾರಾಯಣ : ಸೋಮವಾರ ಕರೆಸುತ್ತೇನೆ.

ಬಿನ್ನಿಮಿಲ್‌ನಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುತ್ತಿರುವುದು.

ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಉಪಾಧ್ಯಕ್ಷರೇ, ಚಿಕ್ಕಪೇಟೆ ವಿಧಾನ ಸಭಾ ವ್ಯಾಪ್ತಿಗೆ ಬರುವ ಅತ್ಯಂತ ಹಳೆಯದಾದ ಬಿನ್ನಿ ಪೇಟೆ ಹತ್ತಿ ಗಿರಣಿ ಕಾರ್ಖಾನೆಯಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ 7,200 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅದು ಆದ ಮೇಲೆ ಸ್ಟ್ರೈಕ್ ಮಾಡಿ 3,200 ಜನ ಮಾಡಿದರು. ಮತ್ತೆ ಸ್ಟ್ರೈಕ್ ಮಾಡಿ 1,300 ಜನ ಕಾರ್ಮಿಕರನ್ನು ಇಟ್ಟುಕೊಂಡರು. ಹಂತ ಹಂತವಾಗಿ ಕಾರ್ಮಿಕರನ್ನು ಕಾರ್ಖಾನೆಯಿಂದ ತೆಗೆದು ಹಾಕಿ ಮಿಲ್ ಮುಚ್ಚಿ ಹೊಸೂರಿನಲ್ಲಿರತಕ್ಕಂತಹ ಅವರ ಒಂದು ನಿವೇಶನದಲ್ಲಿ ಮಿಲ್ ಬದಲಾವಣೆ ಮಾಡಿ ಇಲ್ಲಿರತಕ್ಕಂತಹ ಮಿಲ್‌ನಲ್ಲಿ ಅಪಾರ್ಟ್‌ಮೆಂಟ್ಸ್ ಬಿನ್ನಿ ಪೇಟೆ ವಿಧಾನ ಸಭಾ ಸದಸ್ಯರು ಮಾನ್ಯ ಸಚಿವರಾದ ಶ್ರೀಮಾನ್ ಸೋಮಣ್ಣನವರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಏನು ಇತ್ತು, ಎಸ್‌ಬಿಐ ನವರಿಗೆ ಸುಮಾರು ಮೂರು ಎಕರೆ ಜಮೀನನ್ನು ಮಾರಿದ್ದಾರೆ. ಈಗ 1,300 ಜನ ವರ್ಕರ್ಸ್‌ನಲ್ಲಿ 700 ಜನರಿಗೆ ತೆಗೆಯುತ್ತೇವೆಂದು ನೋಟಿಸ್ ಬೋರ್ಡ್ ಹಾಕಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಲೇಬರ್ ಕಮಿಷನರ್ ಇದರ ಬಗ್ಗೆ ಏನಾದರೂ ಕನ್‌ಸೀಲಿಯೇಷನ್ ಮಾತುಕತೆಗೆ ಫಿಕ್ಸ್ ಮಾಡಿದ್ದೀರೋ ಇದನ್ನು ದಯಮಾಡಿ ತಿಳಿಸಬೇಕು. 10ನೇ ತಾರೀಖು ಕೊಡತಕ್ಕಂತಹ ಸಂಬಳವನ್ನು ಈ ತಿಂಗಳಿನಲ್ಲಿ ಸಂಬಳ ಕೊಡಲಿಲ್ಲ. ಅವರು ಬಡ ಕುಟುಂಬದ ಕಾರ್ಮಿಕ. ಅವರು ತಿನ್ನುವುದಕ್ಕೆ ಅನ್ನ ಇಲ್ಲದೆ ಬೀದಿ ಪಾಲಿಗಿದ್ದಾರೆ. ಆ ಸಂಬಳ ಕೂಡಲೇ ಕೊಡಿಸುವ ವ್ಯವಸ್ಥೆ ಮಾಡಬೇಕು. ಸರ್ಕಾರ ಏನು ಅವರಿಗೆ ಕರೆಂಟ್ ನೀರು ಪೂರೈಕೆ ಮಾಡುತ್ತಿದೆ, ಅದನ್ನು ಬಂದ್ ಮಾಡಿಸಬೇಕು. ಮತ್ತು ನಗರ ಪಾಲಿಕೆಗೆ ಸುಮಾರು 29 ಲಕ್ಷ ರೂಪಾಯಿ ಅವರು ತೆರಿಗೆಯನ್ನು ಕೊಡಬೇಕು, ಅದನ್ನು ಕೂಡ ಬೆಂಗಳೂರು ನಗರ ಪಾಲಿಕೆಯವರು ಕೇಳಿಲ್ಲ ಈ ರೀತಿಯಾಗಿ ಬಹಳ ನಾಜೂಕಾಗಿ ಹಂತ ಹಂತವಾಗಿ ಕಾರ್ಮಿಕರಿಗೆ ಕಡಿಮೆಮಾಡಿ ಏನು 600 ಜನ ಉಳಿಸಿಕೊಂಡಿದ್ದಾರೆ ಅದನ್ನು ಮುಚ್ಚಿ ಹೊಸೂರಿನಲ್ಲಿ ಈ ಫ್ಯಾಕ್ಟರಿಯನ್ನು ಶಿಫ್ಟ್ ಮಾಡಿ ಇದನ್ನು ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡುವುದಕ್ಕೆ ಬಿನ್ನಿ ಮಿಲ್‌ನವರು ಹೊರಟಿದ್ದಾರೆ. ಇದೇ ರೀತಿಯಾಗಿ ರಾಜ ಮಿಲ್‌ಗೂ ಕೂಡ ಬೆಂಕಿ ಹಾಕಿ ಮುಚ್ಚಿ ಹಾಕಿದ್ದಾರೆ. ರಾಜ ಮಿಲ್ ಬೆಂಗಳೂರು ನಗರದ ಅತ್ಯಂತ ಹಳೆಯದಾದ ಮಿಲ್. ಆ ಮಿಲ್‌ಗೆ ಬೆಂಕಿ ಹಾಕಿ ಅಲ್ಲಿರತಕ್ಕಂತಹ ಜನರಿಗೆ ಮಿನರ್ವ ಮಿಲ್‌ಗೆ ಶಿಫ್ಟ್ ಮಾಡಿದ್ದಾರೆ. ಅದೇ ರೀತಿಯಾಗಿ ಬಿನ್ನಿ ಮಿಲ್ ಆಗುತ್ತದೆ. ದಯವಿಟ್ಟು ಸರ್ಕಾರ ಮಧ್ಯ ಪ್ರವೇಶಿಸಿ ಮತ್ತೆ 700 ಜನ ಕಾರ್ಮಿಕರನ್ನು ತೆಗೆಯುವ

ಹುನ್ನಾರ ಆಗಿದೆ, ಅದನ್ನು ತಕ್ಷಣ ತಡೆಗಟ್ಟುವುದಕ್ಕೆ ತಮ್ಮ ಮುಖೇನ ಕಾರ್ಮಿಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ವಿ. ಸೋಮಣ್ಣ (ಬಂಧೀಖಾನೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಿನ್ನಿ ಮಿಲ್ ಏನಿದೆ, ಪ್ರಾಯಶಃ ಇದು ತುಂಬ ಪುರಾತನವಾದ ಮಿಲ್. ಇದಕ್ಕೆ ಒಡೆಯರ್ ಗ್ರೂಪ್ ಮತ್ತು ಗೋಯಂಕ ಗ್ರೂಪ್‌ನವರು ಮಾಲೀಕರಾಗಿ ನಡೆಸುತ್ತಿದ್ದರು. ಸುಮಾರು ಎರಡು ವರ್ಷಗಳಿಂದ ಈಚೆಗೆ ಗೋಯಂಕ ಗ್ರೂಪ್‌ನವರು ಮಿಲ್‌ಅನ್ನು ನಡೆಸುತ್ತಿದ್ದಾರೆ. ಅದು ಆದ ತಕ್ಷಣ ಯಾರಿಗೂ ಹೇಳದೆ, ಕೇಳದೆ ಒಡೆಯರ್ ಗ್ರೂಪ್ ತೆಗೆದುಕೊಂಡು ತಕ್ಷಣ ಇದರಲ್ಲಿ ಇದ್ದ 7000 ಕಾರ್ಮಿಕರು ಈಗ 1,300 ಜನ ಕಾರ್ಮಿಕರಾಗಿದ್ದಾರೆ. ಬಾಕಿಯವರಿಗೆ ಒಂದಲ್ಲ ಒಂದು ರೂಪದಲ್ಲಿ ತೊಂದರೆ ಕೊಟ್ಟು, ಅವರನ್ನು ಮನೆಗಳಿಗೆ ಕಳುಹಿಸಿದ್ದಾರೆ. 1,300 ಜನರಲ್ಲಿ ಕೂಡ 500 ಜನರಿಗೆ ಯಾವುದೇ ಉದ್ದೇಶ ಇಲ್ಲದೆ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಅವರಿಗೆ ಕೇವಲ 25 ಸಾವಿರದಿಂದ 30 ಸಾವಿರದವರೆಗೆ ಮಾತ್ರ ಬೆನಿಫಿಟ್ಸ್ ಕೊಟ್ಟು ತೆಗೆಯತಕ್ಕಂತಹ ಕೆಲಸ ಮಾಡಿದ್ದಾರೆ. ಈಗಾಗಲೇ ನನ್ನ ಗಮನಕ್ಕೆ ಬಂದ ತಕ್ಷಣ ಸಂಬಂಧಪಟ್ಟ ಮಾಲೀಕರಿಗೆ ಪತ್ರ ಬರೆದು, ದೂರವಾಣಿ ಮುಖಾಂತರ ಮಾತನಾಡಿದರೆ ಗೋಯಂಕದವರು ಒಡೆಯರ್ ಗ್ರೂಪ್ ಮೇಲೆ ಹೇಳುತ್ತಾರೆ. ಒಡೆಯರ್ ಗ್ರೂಪ್‌ನವರು ಗೋಯಂಕ ಗ್ರೂಪ್‌ನವರ ಮೇಲೆ ಹೇಳುತ್ತಾರೆ. ಎರಡು ವರ್ಷಗಳ ಹಿಂದೆ ನಡೆಯುತ್ತಿದ್ದ ಗೋಯಂಕ ಗ್ರೂಪ್ ಇಬ್ಬರೂ ಕೂಡ ಆ ಆಡಳಿತ ಮಂಡಳಿಯಲ್ಲಿ ಇರತಕ್ಕಂತಹವರು. ಬಾಂಬೆಯಲ್ಲಿ ಇರತಕ್ಕಂತಹ ಕೆಲವು ನಿರ್ದೇಶಕರು, ಮಡ್ರಾಸ್‌ನಲ್ಲಿ ಇರತಕ್ಕಂತಹ ನಿರ್ದೇಶಕರು ಒಟ್ಟಿಗೆ ಸೇರಿ 120 ಎಕರೆ ಜಾಗ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಇರತಕ್ಕಂಥದ್ದು ಇದೆ. ವಾಟಾಳ್ ನಾಗರಾಜ್‌ರವರೂ ಕೂಡ ಇದೇ ಕ್ಷೇತ್ರದ ಹಿರಿಯ ಸದಸ್ಯರು ಅವರು ಈ ಕ್ಷೇತ್ರದ ಶಾಸಕರೂ ಆಗಿದ್ದರು. ಸುಮಾರು ವರ್ಷಗಳಿಂದ ಅವರಿಗೆ ಮನವಿಗಳನ್ನು ಕೊಡತಕ್ಕಂಥದ್ದಕ್ಕೆ ನನ್ನ ಕಛೇರಿಯಲ್ಲಿ ಕುಂದುಕೊರತೆಗಳ ಮಂತ್ರಿಯಾದ ಮೇಲೆ ಗೋಯಂಕ ಗ್ರೂಪ್ ಉಪಾಧ್ಯಕ್ಷರಾದ ಜೋಷಿಯವರು ಮತ್ತು ಮುಖ್ಯ ಅಭಿಯಂತರರು, ನಿರ್ದೇಶಕರು ಮೂರು ಜನರಿಗೆ ಕರೆದು ನಾಲ್ಕು ಸಭೆಗಳನ್ನು ಮಾಡಿ ಆ ಸಭೆಗಳಲ್ಲಿ ಕನಿಷ್ಟ ಸೌಜನ್ಯತೆಗೆ ಮಾನವೀಯತೆ ದೃಷ್ಟಿಯಿಂದ ಅಲ್ಲಿರತಕ್ಕಂತಹ ಸುಮಾರು 690 ಜನರಿಗೆ ಎಲ್ಲೂ ಕೂಡ ಆಶ್ರಯ ಇಲ್ಲದೆ, ಇರುವವರಿಗೆ 20' X 30' ಜಾಗ ಕೊಟ್ಟಿದ್ದೇವೆ. ಉಳಿದ ಜಾಗವನ್ನು ಸಾಲ ಮತ್ತೊಂದು ಇದೆ ಎಂದು ಹೇಳಿದರು. ಇದಕ್ಕೆ ಕೂಡ ಒಪ್ಪಂದಕ್ಕೆ ಬಾರದೆ ಇದ್ದಕ್ಕಿದ್ದ ಹಾಗೆ ಇವತ್ತು 15-20 ವರ್ಷಗಳಿಂದ ಈಚೆಗೆ ಯಾವ ಗೋಯಂಕ ಗ್ರೂಪ್‌ನವರು ಒಡೆಯರ್ ಗ್ರೂಪ್‌ಗೆ ಹಸ್ತಾಂತರ ಮಾಡಿ ಇವತ್ತು ಕಾರ್ಖಾನೆಯನ್ನು ಮುಚ್ಚತಕ್ಕಂತಹ ಕೆಲಸ 15-20 ದಿನಗಳಿಂದ ಈಚೆಗೆ ನಡೆಯುತ್ತಿದೆ, ನಾನೂ ಕೂಡ ನಿನ್ನೆ ಸಂಬಂಧ ಪಟ್ಟ ಇಲಾಖೆಗಳ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಮಿತ್ರರಾದ ಶಾಸಕರಾದ ಪ್ರಕಾಶ್‌ರವರು ಇದರ ಬಗ್ಗೆ ತುಂಬ ಕಳಕಳಿ ವಹಿಸಿದ್ದಾರೆ. ನಾನು ತಮ್ಮ ಮೂಲಕ ನನ್ನ ಸಹೋದ್ಯೋಗಿ ಸಚಿವರಲ್ಲಿ ವಿನಂತಿ ಮಾಡುವುದು, ಇದಕ್ಕೆ ಏನಾದರೂ ಅಂತಿಮವಾದ ರೂಪವನ್ನು ಕೊಡಬೇಕಾಗಿದೆ. ಸಂಬಂಧಪಟ್ಟ ಕಾರ್ಖಾನೆಯವರು, ಬಿನ್ನಿ ಈಸ್ಟನ್ ಗಾರ್ಡನ್ ಅದು ತುಂಬ ಪ್ರಸಿದ್ಧವಾದ ಗಾರ್ಡನ್ನು, ಇದಕ್ಕೆ ಐದು ಎಕರೆ ಜಾಗವನ್ನು 1991-92ರಲ್ಲಿ

ಖಾಸಗಿ ವ್ಯಕ್ತಿಗಳಾದ ಎಸ್.ಬಿ.ಐ. ನವರಿಗೆ ಮಾರಾಟ ಮಾಡಿ ಅಲ್ಲಿ ಅವರಿಗೆ ಅಪಾರ್ಟ್‌ಮೆಂಟ್ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಈ 120 ಎಕರೆಯಲ್ಲಿ ಈ ರೀತಿಯಾಗಿ ಸ್ಯಾಂಕ್ಷನ್ ಮಾಡುತ್ತಿದ್ದರೆ ಅದಕ್ಕೆ ವ್ಯವಸ್ಥಿತವಾಗಿ ಸರ್ಕಾರದ ವತಿಯಿಂದ ನಾವು ಪ್ರಾಮಾಣಿಕವಾಗಿ ತಡೆಗಟ್ಟಿ ಯಾವ ಕಾರ್ಮಿಕರಿಗೋಸ್ಕರ ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸತಕ್ಕಂತಹ ಕೆಲಸ ಮಾಡುತ್ತಿದ್ದರೂ ಕೂಡ ಇದರಲ್ಲಿ ಎರಡೂ ಗುಂಪಿನವರು ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳಿ ಇಲ್ಲದ ಸುಳ್ಳು ಪುರಾವೆಗಳನ್ನು ತೋರಿಸಿ ಸಾಲ ಇದೆ ಎಂದು ಹೇಳುತ್ತಿದ್ದಾರೆ. ಈಗ ಬಂದಿರುವಂಥಾದ್ದು ನೌಕರರ ತೊಂದರೆಯಾಗಿದೆ. ಈಗ ಅವರು ಬೀದಿಪಾಲು ಆಗುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಸನ್ಮಾನ್ಯ ಸಚಿವರು ತಕ್ಷಣವೇ ಅವರನ್ನು ಕರೆಸಿಕೊಂಡು ಅವರ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಸುಮಾರು ವರ್ಷಗಳಿಂದ ಅಲ್ಲಿ ಯಾರು ವಾಸ ಮಾಡುತ್ತಿದ್ದಾರೆ. ಅವರಿಗೆ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ 120 ಎಕರೆ ಜಾಗದಲ್ಲಿ ಸುಮಾರು 12-13 ಎಕರೆ ಜಾಗವನ್ನು ಕೊಟ್ಟು ಅವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪ್ರೊಸೀಡಿಂಗ್ಸ್ ಕೂಡ ಆಗಿದೆ. ಆ ರೀತಿಯಾಗಿ ಮಾಡಿದರೆ ಅಲ್ಲಿ ನೌಕರರು ಉಳಿದುಕೊಳ್ಳುತ್ತಾರೆ, ಮತ್ತೆ ನೂರಾರು ವರ್ಷಗಳ ಇತಿಹಾಸವಿರುವಂತಹ ಕಾರ್ಖಾನೆಗೆ ಕೂಡ ಶಕ್ತಿ ತುಂಬುವುದಕ್ಕೆ ಆಗುತ್ತದೆ. ಆದುದರಿಂದ ಇದನ್ನು ಸಂಬಂಧಪಟ್ಟಂತಹ ಸಚಿವರ ಗಮನಕ್ಕೆ ತಂದು ಅದಷ್ಟು ಜಾಗ್ರತೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ಕ್ಷೇತ್ರವನ್ನು ಬಹಳ ದಿವಸಗಳ ಹಿಂದೆ ಪ್ರತಿನಿಧಿಸುತ್ತಿದೆ. ಆಗ ಈ ಬಿನ್ನಿಮಿಲ್ ಅತ್ಯುತ್ತಮವಾಗಿ ಇದು ಕರ್ನಾಟಕ ರಾಜ್ಯಕ್ಕೆ ಅಲ್ಲ, ಇದು ಇಡೀ ದೇಶಕ್ಕೆ ಮಾದರಿಯಾಗಿ ಒಳ್ಳೆಯ ಹೆಸರನ್ನು ಪಡೆದಂತಹ ಮಿಲ್ ಆಗಿತ್ತು. ಅಲ್ಲಿರುವಂತಹ ಕಾರ್ಮಿಕರ ಮನೆಗಳು, ದೊಡ್ಡ ಸ್ಟೇಡಿಯಂ, ನಾಟಕ ರಂಗಮಂದಿರ, ಈ ಎಲ್ಲಾ ವ್ಯವಸ್ಥೆಯನ್ನು ನೋಡಿದಾಗ ಇದು ಉತ್ತಮವಾದಂತಹ ಮಿಲ್ ಆಗಿತ್ತು. ಅದು ಬರು ಬರುತ್ತಾ ಒಬ್ಬರಿಂದ ಒಬ್ಬರಿಗೆ ಎರಡು ಮೂರು ಜನರ ಮಾಲಿಕತ್ವಕ್ಕೆ ಹೋಗಿ ಈಗ ಎಲ್ಲಿಗೆ ಬಂದಿದೆ ಎಂದರೆ 120 ಎಕರೆ ಪ್ರದೇಶದಲ್ಲಿ ಒಂದು ಎಕರೆಗೆ ಇವತ್ತು ಕನಿಷ್ಟವೆಂದರೂ ಒಂದು ಕೋಟಿ ರೂಪಾಯಿಗಳ ಮೇಲೆ ಬೆಲೆಯಾಗುತ್ತದೆ. ಇದನ್ನು ಸುಮಾರು 120-125 ಕೋಟಿ ರೂಪಾಯಿಗಳಿಗೆ ಈಗಾಗಲೇ ಮಾರಬೇಕೆಂದು ಹೊರಟಿದ್ದಾರೆ. ಅಲ್ಲಿರುವಂತಹ ಕಾರ್ಮಿಕರೆಲ್ಲಾ ಬೀದಿಪಾಲಾಗುವಂತಹ ಪರಿಸ್ಥಿತಿಯನ್ನುಂಟು ಮಾಡಲು ಹೊರಟಿದ್ದಾರೆ. ಈಗಾಗಲೇ ಕಾರ್ಮಿಕರು ಬೀದಿಗೆ ಬಂದಿದ್ದಾರೆ. ಸರ್ಕಾರದ ಮಂತ್ರಿಗಳು ಯಾವ ಇಲಾಖೆಯವರೇ ಇರಬಹುದು. ತಾವು ಸರ್ಕಾರದ ಪರವಾಗಿ ಮಂತ್ರಿಗಳಾಗಿದ್ದೀರಿ. ಅಲ್ಲಿ ನಡೆಯುವಂತಹ ಅಕ್ರಮಗಳು, ಅನ್ಯಾಯ ಮತ್ತು ಮಿಲ್ ಅನ್ನು ಮುಚ್ಚುವಂತಹ ವ್ಯವಸ್ಥೆಯನ್ನು ಹೇಳಿದ್ದಾರೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ನಿರ್ಧಾರವನ್ನು ಕೈಗೊಳ್ಳಬೇಕು. ಈಗ ಸರ್ಕಾರ ನೇರವಾಗಿ ಏನು ಕ್ರಮ ಕೈಗೊಳ್ಳಬೇಕೆಂದರೆ ಆ ಮಿಲ್‌ಅನ್ನು ಮಾರುವುದಕ್ಕೆ ಅವಕಾಶ ಕೊಡಬಾರದು. ಎರಡನೆಯದಾಗಿ ಅಲ್ಲಿರುವಂತಹ ಕಾರ್ಮಿಕರ ಮನೆಗಳು ಏನಿವೆ, ಅದನ್ನು ಅವರ ಹೆಸರಿಗೆ ಮಾಡಿಕೊಡಬೇಕು. ಮೂರನೆಯದಾಗಿ ಮಿಲ್‌ಅನ್ನು ನಡೆಸುವಂತಹ ವ್ಯವಸ್ಥೆಯನ್ನು ಮಾನ್ಯ ಕಾರ್ಮಿಕ ಸಚಿವರು ಮಾಡಬೇಕು. ಈಗ ಇರತಕ್ಕಂಥ ಮಾಲೀಕರನ್ನು ಕರೆಯಿಸಿ,

ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ರಾತ್ರೋರಾತ್ರಿ ಅದನ್ನು ಸಹಿ ಹಾಕಿ ತೆಗೆದುಕೊಳ್ಳುವಂತಹ ವ್ಯವಸ್ಥೆ ಇದೆ. ಈಗಾಗಲೇ ಮಾಲಿಕರು ಅಡ್ವಾನ್ಸ್ ಹಣವನ್ನು ಕೊಟ್ಟಿದ್ದಾರೆ. ಈಗಾಗಲೇ 20 ಕೋಟಿ ರೂ. ಅಡ್ವಾನ್ಸ್ ಕೊಟ್ಟು ಅದನ್ನು ಮಾರುವುದಕ್ಕೆ ಹೊರಟಿದ್ದಾರೆ. ಆದುದರಿಂದ ಕೂಡಲೇ ತಾವು ಎಚ್ಚರ ವಹಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಬಿನ್ನಿಮಿಲ್‌ನ ಆಡಳಿತ ವರ್ಗದವರು ಹಣಕಾಸಿನ ತೊಂದರೆ ಮತ್ತು ರಾ-ಮೆಟೀರಿಯಲ್‌ಗಳ ಬೆಲೆ ಹೆಚ್ಚಳದಿಂದಾಗಿ ಈಗಾಗಲೇ ಒಂದು ವಿಂಗ್ ಕ್ಲೋಸ್ ಆಗಿದೆ, ಎರಡನೆಯ ವಿಂಗ್ ಭಾಗಶಃ ಕ್ಲೋಸ್ ಮಾಡಿದ್ದಾರೆ. ಅದಕ್ಕೆ ಅವರು ಬೆಲೆ ಏರಿಕೆ, ಮತ್ತೆ ಹಲವಾರು ಕಾರಣಗಳನ್ನು ಹೇಳುತ್ತಿದ್ದಾರೆ. ಇಲ್ಲಿ 1166 ಜನ ಕಾರ್ಮಿಕರು ಇದ್ದಾರೆ, ಅದರಲ್ಲಿ 591 ಜನರಿಗೆ ಕೆಲಸವಿಲ್ಲದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೋಸ್ಕರ ಕಾರ್ಮಿಕರು ಮುಷ್ಕರವನ್ನು ಮಾಡುತ್ತಿದ್ದಾರೆ. ಆ ಕಾರ್ಖಾನೆಯವರು ಸ್ವಯಂ ನಿವೃತ್ತಿಯನ್ನು ತೆಗೆದುಕೊಳ್ಳುವಂಥಾದ್ದಕ್ಕೆ ಘೋಷಣೆಯನ್ನು ಮಾಡಿದ್ದಾರೆ. ಆದರೆ ಅದಕ್ಕೆ ಕಾರ್ಮಿಕರು ಒಪ್ಪುತ್ತಾ ಇಲ್ಲ. ಈ ಎರಡು ಸಂಘರ್ಷಗಳ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳು ಸಂಧಾನ ಮಾಡುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆಂದು ಸದನಕ್ಕೆ ತಿಳಿಸುತ್ತೇನೆ.

ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಿಲ್‌ನವರು ಸ್ವಯಂ ನಿವೃತ್ತಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಮದ್ರಾಸ್ ಮಿಲ್‌ನವರು ದಿ: 28-3-98ರಲ್ಲಿ ಒಂದೂಕಾಲೂ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ತೀರ್ಮಾನ ಮಾಡಿದ್ದಾರೆ. ಅದರ ಪ್ರತಿಯೂ ನನ್ನ ಬಳಿ ಇದೆ. ಬೆಂಗಳೂರಿನಲ್ಲಿರುವ ಹತ್ತಿ ಗಿರಣಿಯಲ್ಲಿ 15 ದಿವಸಗಳ ಗ್ರಾಚ್ಯುಟಿಯನ್ನು 18 ದಿವಸಗಳ ಪರಿಹಾರವೆಂದು ಮಾಡಿದೆ. ಹತ್ತು ಸಾವಿರ ರೂಪಾಯಿಗಳಿಂದ 15 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಇದು ಯಾವ ನ್ಯಾಯ? ಮದ್ರಾಸ್ ಬಿನ್ನಿಮಿಲ್‌ಗೆ ಒಂದು ನ್ಯಾಯ, ಬೆಂಗಳೂರು ಬಿನ್ನಿಮಿಲ್‌ಗೆ ಒಂದು ರೀತಿಯ ನ್ಯಾಯವಾಗಿದೆ. ಇದರ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ಕಾರ್ಖಾನೆಯವರು ಸ್ವಯಂ ನಿವೃತ್ತಿ ಸ್ಕೀಂ ಅನ್ನು ಕಾರ್ಮಿಕರಿಗೆ ಅನೌನ್ಸ್ ಮಾಡಿದ್ದಾರೆ. ಅದರ ಪ್ರಕಾರ 15 ದಿವಸಗಳ ಗ್ರಾಚ್ಯುಟಿ, ಇಂಡಸ್ಟ್ರೀಯಲ್ ಅವರ ಒಂದು ವರ್ಷದ ಸರ್ವಿಸ್‌ಗೆ, ಕಾಂಪನ್‌ಸೇಷನ್ ಎಂದು ಕೊಡುವುದಕ್ಕೆ 15 ದಿವಸಗಳ ಸಂಬಳ ಮತ್ತು 3 ದಿವಸಗಳ ಸಂಬಳ ಒಟ್ಟಿಗೆ ಲಮ್‌ಸಮ್ ಆಗಿ ಇದರ ಜೊತೆಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಅನೌನ್ಸ್ ಮಾಡಿದ್ದಾರೆ. ಅದನ್ನು ಕಾರ್ಮಿಕರು ಒಪ್ಪಲೇಬೇಕೆಂದು ಏನೂ ಇಲ್ಲ. ಅದನ್ನು ಅವರು ಒಪ್ಪುತ್ತಾ ಇಲ್ಲ. ಅದಕ್ಕಾಗಿ ಕಾರ್ಮಿಕರು ಮುಷ್ಕರವನ್ನು ಮಾಡುತ್ತಿದ್ದಾರೆ. ಈ ಎರಡು ವಿಷಯಗಳ ಬಗ್ಗೆ ನಮ್ಮ ಇಲಾಖೆಯವರು ಇವರೊಡನೆ ಸಾಮರಸ್ಯಕ್ಕೆ ಬರುವುದಕ್ಕೆ ಸಾಧ್ಯತೆ ಇದೆಯೇ? ಈ ಕಾರ್ಖಾನೆಯನ್ನು ಪುನರ್ ಆರಂಭ ಮಾಡುವುದಕ್ಕಾಗುತ್ತದೆಯೇ ಮತ್ತು ಈ ಕಾರ್ಮಿಕರನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಪಿ. ಎಸ್. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ ಈ ಮಿಲ್‌ನವರು ಕಾರ್ಮಿಕರಿಗೆ ಸಂಬಳವನ್ನು ಕೊಟ್ಟಿಲ್ಲ. ಅಲ್ಲಿ ಕಾರ್ಮಿಕರು ಒದ್ದಾಡುತ್ತಿದ್ದಾರೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕರ ಸಚಿವರು) : ಸದಸ್ಯರುಗಳ ಜೊತೆಗೆ ಮಾತನಾಡಿ ಅದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ವಿದ್ಯುತ್ ಕಡಿತಗೊಳಿಸಿರುವುದರಿಂದ ಉದ್ಭವಿಸಿದ ಪರಿಸ್ಥಿತಿ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಕಡಿತ ಮಾಡುತ್ತಿರುವಂತಹ ವಿಷಯ ಅತ್ಯಂತ ಅಪಾಯಕಾರಿ ಮಟ್ಟಕ್ಕೆ ಈಗ ತಲುಪಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್‌ಗೆ ಸಂಬಂಧಪಟ್ಟಂತೆ ಇಬ್ಬರೂ ಮಂತ್ರಿಗಳು ಸದನದಲ್ಲಿ ಇಲ್ಲ.

ಉಪಾಧ್ಯಕ್ಷರು : ಅವರು ಪರ್ಮಿಷನ್ ತೆಗೆದುಕೊಂಡು ಬೇರೆ ಸರ್ಕಾರಿ ಕೆಲಸಕ್ಕೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಇಲ್ಲಿ ಎಲ್ಲಕ್ಕೂ ಸಿದ್ದೌಷಧವಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರ ವಿದ್ಯುತ್ ಖೋತಾದ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಚಿಂತನೆಯನ್ನು ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ವಿದ್ಯುತ್ ಇಲಾಖೆಯನ್ನು ಹೊಂದಿರುವಂತಹ ರಾಜ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಒಂದು ರೀತಿಯ ಹೇಳಿಕೆಯನ್ನು ಕೊಡುತ್ತಾರೆ. ಇದರಿಂದ ಗೊಂದಲವೂಂಟಾಗಿದೆ, ವಿದ್ಯುತ್ ಖೋತಾ ಇದೆ ಎಂದು ಒಬ್ಬರು ಹೇಳುತ್ತಾರೆ. ವಿದ್ಯುತ್ ಖೋತಾ ಇಲ್ಲವೆಂದು ಇನ್ನೊಬ್ಬರು ಹೇಳುತ್ತಾರೆ. ವಿದ್ಯುತ್ ಖೋತಾವನ್ನು ರದ್ದು ಮಾಡಿದ್ದೇವೆಂದು ಮತ್ತೊಬ್ಬರು ಹೇಳುತ್ತಾರೆ. ಇದು ಇವರಲ್ಲೆ ಹೊಂದಾಣಿಕೆ ಇಲ್ಲದೇ ನಡೆಯುತ್ತಿರುವಂತಹ ವ್ಯವಸ್ಥೆಯಾಗಿದೆ. ಇಲ್ಲಿ ಈ ಹೇಳಿಕೆ ಏನಾದರೂ ಇರಲಿ, ವಸ್ತುಸ್ಥಿತಿ ಏನಾಗಿದೆ ಎಂದರೆ ಬೆಂಗಳೂರು ನಗರವೊಂದರಲ್ಲೇ ಬೆಳಗಿನಿಂದ ಸಂಜೆಯವರೆಗೆ 40 ಸಾರಿ ವಿದ್ಯುತ್ ನಿಲುಗಡೆಯಾಗುತ್ತಿದೆ. ಬೆಳಿಗ್ಗೆ 5 ಗಂಟೆಗೆ ಒಂದು ಸಾರಿ, 6 ಗಂಟೆಗೆ, 10 ಗಂಟೆಗೆ, ಈ ರೀತಿಯ ಅವ್ಯವಸ್ಥೆ ಏಕೆ? ಏನು ಕಾರಣವೆಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಇದರಿಂದ ಏನಾಗಿದೆ ಎಂದರೆ ಇತ್ತೀಚಿನ ದಿವಸಗಳಲ್ಲಿ ಫ್ಯಾನ್ ಇರಬಹುದು, ಟಿ.ವಿ. ಇರಬಹುದು, ಇದೆಲ್ಲಾ ಭೋಗವಸ್ತುಗಳೇನಲ್ಲ. ಇದನ್ನು ಸಾಮಾನ್ಯ ಜನರು ಗುಡಿಸಲುಗಳಲ್ಲೂ ಉಪಯೋಗಿಸುವಂತಹ ವಸ್ತುವಾಗಿದೆ. ಆದರೆ ಎಲ್ಲಾ ರೀತಿಯಲ್ಲೂ ತೊಂದರೆಯಾಗಿದೆ. ವಿದ್ಯಾರ್ಥಿಗಳಿಗೆ, ರೋಗಿಗಳಿಗೆ, ರೈತರರಿಗೆ, ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ನಾನು ತಮಗೆ ಹೇಳುವುದಾದರೆ ವಿದ್ಯುತ್ ಕೊರತೆಯಿಂದ ಚಾಮರಾಜ